ಒಳಗೆ ಕಳಿಸಿದ. ಒಳಗೆ ಹೋದೊಡನೆ, "ಬನ್ನಿ. ಕೂತ್ಕೊಳ್ಳಿ. ಏನು ತೊಂದರೆ?"ಎಂದು ಹಾರ್ಟ್ ಸ್ಪೆಷಲಿಸ್ಟ್ ಕೇಳಿದಾಗ ಸಂಜಯ ಅವಳತ್ತಲೇ ಕೈತೋರಿದ. ಸುಜಾತ ಮೆತ್ತಗೆ, "ಡಾಕ್ಟರ್..." ಎನ್ನುತ್ತ ತನ್ನ ಕನಸಿನ ವೃತ್ತಾಂತವನ್ನೂ... ತಾನು ಗಾಬರಿಯಾದದ್ದನ್ನೂ ಹೇಳಿದಳು. ಡಾಕ್ಟರ್ ಮುಖದಲ್ಲಿ ಮಂದಹಾಸ. ಆಚೀಚೆ ಇದ್ದ ನರ್ಸುಗಳು 'ಕಿಸಕ್' ಎಂದದ್ದಾಯಿತು. "ಕೆಟ್ಟ ಕನಸು ಬಿದ್ದದ್ದಕ್ಕೆ ಇಷ್ಟು ಹೆದರಿದಿರಾ?"ಎನ್ನುತ್ತ ಅವಳನ್ನು ಪರೀಕ್ಷಿಸಿದವರು, "ಏನೂ ತೊಂದರೆ ಇಲ್ಲ. ಆದರೂ ನಿಮ್ಮ ಸಮಾಧಾನಕ್ಕೆ ಒಂದು ಇ.ಸಿ.ಜಿ. ಮಾಡಿ ನೋಡೋಣ" ಎಂದರು. ಇ.ಸಿ.ಜಿ. ರಿಪೋರ್ಟ್ ಕೂಡ ನಾರ್ಮಲ್ ಆಗಿತ್ತು. "ಪರವಾಗಿಲ್ಲ. ನೀವೆಲ್ಲ ಮಾಮೂಲಾಗಿದ್ದಾಗ ಚೆಕಪ್ ಮಾಡ್ಸೋದೇ ಇಲ್ಲ. ಕನಸಿನ ನೆಪದಿಂದಲಾದರೂ ಚೆಕಪ್ ಆಯಿತಲ್ಲ. ಚೆನ್ನಾಗಿದ್ದೀರಿ. ಆರಾಮಾಗಿರಿ" ಎಂದು ನಕ್ಕು ಕಳಿಸಿದರು. ಕೊಂಚ ಸಮಾಧಾನವಾಯಿತು ಸುಜಾತಳಿಗೆ. 'ಅರಮನೆ'ಯಲ್ಲಿ ಊಟ ಮಾಡಿ... ಒಂದು ಫ್ಯಾನ್ಸಿ ಸೀರೆಯನ್ನು ಕೊಂಡು... ದೇವಸ್ಥಾನಕ್ಕೆ ಹೋಗಿ ತಪ್ಪು ಕಾಣಿಕೆ ಹಾಕಿ ಮನೆಗೆ ಹಿಂತಿರುಗಿದಾಗ ಆತಂಕ ಕೊಂಚ ಕಡಿಮೆಯಾಗಿತ್ತು. ಅರ್ಧ ದಿನ ಕಳೆದಿತ್ತು. ಆದರೂ ಕನಸಿನ ಗುಂಗು ಅವಳನ್ನು ವಾರಪೂರ್ತಿ ಆವರಿಸಿತ್ತು. ಮಗಳು ಬರುವವರೆಗೂ...

ನೇತ್ರಾ ಟ್ರಿಪ್ ಮುಗಿಸಿಕೊಂಡು ಕುಣಿಯುತ್ತಲೇ ಮನೆಗೆ ಬಂದಳು. ದಿನವಿಡೀ ಅಮ್ಮನ ಮುಂದೆ ಸೋಮವಾರಪೇಟೆಯ ಚಿಲುಮೆ ಎಸ್ಟೇಟು, ಮಡಿಕೇರಿ, ರಾಜಾಸೀಟುಗಳ ವಿಚಾರ ಹೇಳಿದ್ದೂ ಹೇಳಿದ್ದೇ. ಸಂಜೆ ಬಂದ ಅಪ್ಪನ ಮುಂದೆಯೂ ಎಲ್ಲ ಪುನರಾವರ್ತನೆಯಾಯಿತು. ಕಲ್ಹತ್ತಗಿರಿ ಫಾಲ್ಸ್, ಕುದುರೆಮುಖ, ಕೆಮ್ಮಣ್ಣುಗುಂಡಿಗಳ ಫೋಟೊ ಒಂದಕ್ಕಿಂತ ಒಂದು ಚೆನ್ನಾಗಿದ್ದವು. ಅವಳ ಸಂತೋಷದಲ್ಲಿ ಪಾಲ್ಗೊಂಡು ನಕ್ಕು ನಲಿದ ಸುಜಾತ ತನ್ನ ಆತಂಕ ಮರೆತಿದ್ದಳು. ಮನೆಯ ವಾತಾವರಣ ಮಾಮೂಲಿಗೆ ಬಂದಿತ್ತು. ಸಂಜಯ ನಿರಾಂತಂಕವಾಗಿ ಚೆನ್ನೈಗೆ 'ಆಫೀಸ್ ಟೂರ್' ಎನ್ನುತ್ತ ಹೋದ. ಮರುದಿನ ನಸುಕಿನಲ್ಲಿಯೇ ಸುಜಾತಳಿಗೆ ಕೆಟ್ಟ ಕನಸು ಬೀಳಬೇಕೆ? ಅದೇ ಕನಸು... ಅದೇ ಗಿರಿಜಾಮೀಸೆಯ ವ್ಯಕ್ತಿ. ಯಾವುದೋ ದೊಡ್ಡ ಗುಡ್ಡದ ಬದಿಗೆ ನಿಂತಿದ್ದಾನೆ. ಹೇಳಿದ್ದೂ ಅದೇ. ಹೆಚ್ಚಾಗಿ ಸೇರಿಸಿದ್ದು "ಏನೇನ ಬೇಕೋ... ತಿಂದು, ಕುಡದು, ಉಟ್ಟ ತೊಟ್ಟ ಅನುಭವಿಸಿಬಿಡು. ಭಾಳ ದಿನಾ ಇಲ್ಲ ಇನ್ನ..." ಎಂದಿದ್ದ. ಎದೆ ನಡುಗಿ ಹೋಯ್ತು ಅವಳಿಗೆ. ಪಕ್ಕದಲ್ಲೇ ಮಲಗಿದ್ದ ನೇತ್ರಳನ್ನು ಎಬ್ಬಿಸಿ ಅಳುತ್ತಲೇ ಕನಸನ್ನೆಲ್ಲ ವಿವರಿಸಿದಳು. ಅವಳು ಗಾಬರಿಯಾದರೂ ತೋರಿಸಿಕೊಳ್ಳದೇ, "ಕನಸಿಗೆಲ್ಲಾ ಏನ ಹೆದರೋದು ಅಮ್ಮಾ? ನಾವು ಎಜುಕೇಟೆಡ್ ಇದ್ದೀವಿ. ಕನಸ ನಂಬಿ ಅಳಕೋತ ಹೊರಗ ಹೇಳಿದರ ಮಂದಿ ನಗತಾರ. ಖರೆ ನಿನ್ನ ಸಮಾಧಾನದ ಸಲವಾಗಿ 'ಕೊಲಂಬಿಯಾ ಏಶಿಯಾ' ಹಾಸ್ಪಿಟಲ್‌ನ್ಯಾಗ ಟೋಟಲ್ ಚೆಕಪ್ ಮಾಡಿಸಿಬಿಡೋಣು. ಅಲ್ಲೆ 'ಆಫರ್' ನಡದದ. ನನ್ನ ಫ್ರೆಂಡ್ ತಾಯಿ ನಿನ್ನೇನ ಚೆಕಪ್ ಮಾಡಿಸಿಕೊಂಡು ಬಂದರು" ಎಂದಳು. ಸುಜಾತ ಸುಧಾರಿಸಿಕೊಂಡರೂ "ಅದು... ಭಾಳ ಧೊಡ್ಡದೂ... ಮತ್ತ ತುಟ್ಟಿ ಹಾಸ್ಪಿಟಲ್ ಅಂತಾರಲಾ?... ನಿಮ್ಮಪ್ಪ ಬ್ಯಾರೇ ಊರಾಗಿಲ್ಲ" ಎಂದಳು ಅನುಮಾನಿಸುತ್ತ. "ಆರೋಗ್ಯಕ್ಕಿಂತಾ ಹೆಚ್ಚಿಂದೇನೂ ಇಲ್ಲಮ್ಮಾ. ಅಪ್ಪಾನ ಕಾರ್ಡ್ ನನ್ನ ಕಡೆ ಅದ. ನೀ ತಯಾರಾಗು" ಎಂದಳು. ಸುಜಾತ ಲಗುಬಗೆಯಿಂದ ಸ್ನಾನ ಮುಗಿಸಿ... ತಿಂಡಿ ಮಾಡಿ ಸಿದ್ಧಳಾಗತೊಡಗಿದಳು. ನಂತರ ಎದ್ದ ಆಶಿಶನಿಗೂ ವಿಷಯ ತಿಳಿದಾಗ, "ಬೆಳಗಾ ಮುಂಜಾನೆ ಕನಸು... ಖರೆ ಆಗೋದು... ಅದಕ್ಕ ಹೆದರೋದು... ಎಲ್ಲಾ ಮೂಢನಂಬಿಕಿ ಅಲ್ಲೇನು? ನೀ ಎಲ್ಲಾ ನಂಬ್ತೀಯೇನಮ್ಮಾ?" ಎಂದು ಪ್ರಶ್ನಿಸಿದ್ದ. ನೇತ್ರಾ, "ಮದಲ ಅಮ್ಮಾಗ ತಲಿಗೆ ತ್ರಾಸಾಗೇದ. ಮತ್ತ ನೀ ಅಷ್ಟ ಕಾಡಬ್ಯಾಡಾ. ನಡಿ..." ಎಂದು ಜೋರು ಮಾಡಿದಾಗ ಮಾತಿಲ್ಲದೇ ಡಬ್ಬಿ ತೆಗೆದುಕೊಂಡು ಓಡಿದ್ದ. ತಾಯಿ, ಮಗಳಿಬ್ಬರೂ ತಿಂಡಿ ತಿಂದು ಸಿದ್ಧರಾಗಿ ಒರಿಯನ್ ಮಾಲ್‌ನ ಹಿಂಬದಿಯಲ್ಲಿದ್ದ ಆಸ್ಪತ್ರೆಗೆ ನಡೆದರು. ಸಂಪೂರ್ಣ ಬಾಡಿ ಚೆಕಪ್ ಮಾಡಿಸಿಕೊಂಡಿದ್ದಾಯಿತು.